# ಕತೆಯೇ ಭಾಷೆ


ನಾಂದಿ

ಬಹುಕಾಲದಿಂದ ಕತೆಗಳನ್ನು ಓದುತ್ತ ಕೇಳುತ್ತ ಬಂದವರಿಗೆ ಅರಿವಾಗಿರಬಹುದು 'ಕತೆಯೇ ಒಂದು ಭಾಷೆ' ಎಂದು. ಪ್ರತಿ ಕತೆಗೂ ಕತೆಗಾರನಿಗೂ ತನ್ನದೇ ಆದ ಭಾಷೆಯೊಂದಿರುತ್ತದೆ. ಒಳ್ಳೆಯ ಕತೆ, ಕತೆಗಾರ ಭಿನ್ನ ಮತ್ತು ಅನನ್ಯ. ಕತೆ ಯಾವುದೇ ಭಾಷೆಯಲ್ಲಿ ಮೈತಳೆದಿರಬಹುದು; ತಾನು ಆಕಾರ ಪಡೆದ ಭಾಷೆಯಲ್ಲಿ ತನ್ನದೇ ನುಡಿಗಟ್ಟೊಂದನ್ನು, ವ್ಯಾಕರಣವನ್ನು, ಚಿತ್ರಗಳ ಸಮೂಹವನ್ನು ಅದು ಸೃಷ್ಟಿಸಿರುತ್ತದೆ. ಭಾಷೆಯೊಂದು ಜಗತ್ತಾಗಿರುವಂತೆ, ಕತೆಗಾರನಿಗೇ ವಿಶಿಷ್ಟವಾದ ಜಗತ್ತೊಂದು ಭಾಷೆಯಲ್ಲಿ ಮೂಡಿರುತ್ತದೆ. ಹೊಸಕತೆಗಾರರು ಇದರ ಅರಿವಿಲ್ಲದೇ ತಮ್ಮ ಕತೆಗಳನ್ನು ಬರೆಯಲು ಶುರು ಮಾಡುತ್ತಾರೆ. ಅವರದೇ ಕತೆಯ ಭಾಷೆಯೊಂದು ಅವರ ಶುರುವಿನ ಕತೆಗಳಲ್ಲಿ ಇಲ್ಲದಿರುವುದರಿಂದ ಅವು ಓದುಗರನ್ನು ಸೆಳೆಯುವುದಿಲ್ಲ. ಮೊದಲಿಗೆ ಅವರು ಕತೆಯ ಭಾಷೆಯನ್ನು ಹಿರಿಯ ಕತೆಗಾರರ ಕತೆಗಳಿಂದ ಕಲಿಯುತ್ತಲೇ ಬರೆಯಬೇಕಾಗುತ್ತದೆ; ಬರೆಯುತ್ತಲೇ ಕಲಿಯಬೇಕಾಗುತ್ತದೆ. ಇದೊಂದು ಬಗೆಯಲ್ಲಿ ಮಕ್ಕಳು ಮನೆಯಲ್ಲಿ ಅಪ್ಪಅಮ್ಮನ, ಹಿರಿಯರ ಮಾತುಗಳನ್ನು ಕೇಳುತ್ತ ತಮ್ಮದೇ ಭಾಷೆಯನ್ನು ಕಲಿಯುವ ರೀತಿಯದು. ಭಾಷೆ ಕಲಿತ ಬಳಿಕವಷ್ಟೆ ಅವರು ಲೋಕದ ಹಲವು ವ್ಯವಹಾರಗಳಿಗೆ ಸಲ್ಲುತ್ತಾರೆ. ಕತೆಗಾರನೂ ಹಾಗೆಯೇ. ತನ್ನ ಪೂರ್ವಸೂರಿಗಳ ಕತೆಗಳಲ್ಲಿರುವ ಸನ್ನಿವೇಶಗಳನ್ನು ಚಿತ್ರಿಸುವ, ಪಾತ್ರಗಳನ್ನು ಸೃಷ್ಟಿಸುವ, ಅನುಭವವನ್ನು ಮಂಡಿಸುವ, ಬದುಕಿನ ಹಲವು ಪದರಗಳನ್ನು ಧ್ವನಿಸುವ ಭಾಷೆಯನ್ನು ತಿಳಿದ ಬಳಿಕವಷ್ಟೇ ತನ್ನದೇ ಕತೆಯ ಭಾಷೆಯನ್ನು ರೂಪಿಸಿಕೊಳ್ಳಬಲ್ಲ. ಈ ಕಸುಬುದಾರಿಕೆ ಕತೆಗೆ ಮಾತ್ರ ಸೀಮಿತವಲ್ಲ. ಕವಿತೆ, ಸಿನಿಮಾ, ಚಿತ್ರಕಲೆ, ನಾಟಕ ಹೀಗೆ ಎಲ್ಲ ಲಲಿತಕಲೆಗಳಿಗೂ ಅನ್ವಯಿಸುತ್ತದೆ.

'ಮಯೂರ' ಉತ್ತಮ ಕತೆಗಳಿಗೆ ಮೊದಲಿನಿಂದಲೂ ಒತ್ತು ಕೊಟ್ಟು ಪ್ರಕಟಿಸುತ್ತಿರುವುದನ್ನು ಓದುಗರು ಗಮನಿಸಿರಬಹುದು. ಇಂತಹ 'ಕತೆಯೇ ಭಾಷೆ'ಯಾದ ಕತೆಗಳನ್ನು ಈ ಸಂಚಿಕೆಯಲ್ಲೂ ಕೊಡಲಾಗಿದೆ.

'ದಲಿತ ಸಾಹಿತ್ಯ: ಹೊರಳು ನೋಟ' ಈ ಸಂಚಿಕೆಯ ವಿಶೇಷವಾಗಿದೆ. ಕನ್ನಡ ದಲಿತ ಸಾಹಿತ್ಯ ಅದುವರೆಗೆ ಓದುಗರು ಕಾಣದ ಲೋಕವನ್ನು ತೆರೆದಿಟ್ಟಿತು. ಲೋಕ ಹೀಗೂ ಇದೆ, ಇದೂ ಕೂಡ ಮನುಷ್ಯರು ಬದುಕುವ ಬಗೆ ಎಂಬುದನ್ನು ಪ್ರಕಟಿಸಿತು. ದಲಿತ ಸಾಹಿತ್ಯ ಕೇವಲ ಈ ಕಾರಣಗಳಿಗಾಗಿ ಮಾತ್ರ ಮುಖ್ಯವಾದುದಲ್ಲ. ಅಲ್ಲಿ ಸಮಾನತೆಯ ಒತ್ತಾಯ ಇತ್ತು; ಪ್ರತಿಭಟನೆ, ಅಮಾನವೀಯತೆ, ಹಸಿವು, ಅವಮಾನದಂತಹ ಸಂಗತಿಗಳು ಅದರ ಉಸಿರಿನೊಂದಿಗೇ ಆಡುತ್ತಿದ್ದವು. ಇಂತಹ ದಲಿತ ಸಾಹಿತ್ಯದ ಒಂದು ಹೊರಳು ನೋಟವನ್ನು ನಮ್ಮ ಲೇಖಕರು ಕೊಟ್ಟಿದ್ದಾರೆ. ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಹುಟ್ಟುಹಬ್ಬದ (14 ಏಪ್ರಿಲ್) ಸಂದರ್ಭದಲ್ಲಿ ಕೊಡಲಾಗುತ್ತಿರುವ 'ಮಯೂರ'ದ ಈ ಕಿರುಪ್ರಯತ್ನ ನಿಮಗೆ ಇಷ್ಟವಾದೀತು. ಇದರ ಜೊತೆಗೇ ಕನ್ನಡ ಸಾಹಿತ್ಯದ ಮೇಲಿನ ಅಂಬೇಡ್ಕರ್ ಪ್ರಭಾವದ ಕುರಿತು ವಿಮರ್ಶಕ ಎಚ್. ದಂಡಪ್ಪ ಬರೆದಿದ್ದಾರೆ. ಪ್ರತಿಭಾಶಾಲಿ ಕತೆಗಾರ್ತಿ ಬಿ.ಟಿ. ಜಾಹ್ನವಿ ಮತ್ತು ಸಂಶೋಧಕ ಕೆ.ಜಿ. ನಾಗರಾಜಪ್ಪ ಅವರ ಸಂದರ್ಶನಗಳು ಹೊಸ ಹೊಳಹುಗಳನ್ನು ಓದುಗರಿಗೆ ಕೊಡಬಲ್ಲವು.

**ಸಂದೀಪ ನಾಯಕ**



ವೆಂಕಟ್ರಮಣ ಭಟ್